# ಅಲಂಕಾರಿಕ ಹೂವು ಟಾರ್ಚ್ ಜಿಂಜರ್

ಚಿತ್ರ ಬರಹ: ಗೀತಸದಾ, ಮೋಂತಿಮಾರು

ಹೂವು ಪ್ರಕೃತಿಯ ಅದ್ಭುತ. ಹೂವಿನ ಲೋಕವನ್ನು, ಅದರ ಸೌಂದರ್ಯ, ಆಕರ್ಷಕ ಬಣ್ಣ ಹಾಗೂ ಅದು ಅರಳುವ ಸಂಭ್ರಮವನ್ನು ಹತ್ತಿರದಿಂದ ನೋಡಿದಾಗ, ನಿಜಕ್ಕೂ ಮನಸ್ಸು ದಿಗ್ಭ್ರಮೆಗೊಳ್ಳುತ್ತದೆ. ಈ ಹೂವಿನ ಸೌಂದರ್ಯವನ್ನು ನೋಡಿದಿರಾ? ಪ್ರಕೃತಿಯ ಈ ಸೊಬಗನ್ನು ನೋಡಿ ಮನಸೋತಿರಾ? ಇದಕ್ಕೆ ಆಕರ್ಷಕ ಬಣ್ಣ ಹಾಗೂ ಸೌಂದರ್ಯವನ್ನು ಕೊಟ್ಟ ಮಾಂತ್ರಿಕನ ಕೈ ಚಳಕವನ್ನು ನೋಡಿ ಚಕಿತರಾದಿರಾ?

ಇದೊಂದು ಅಲಂಕಾರಿಕ ಪುಷ್ಪ. ಇದನ್ನು ಡೆಕೋರೇಶನ್‌ಗೇ ಹೆಚ್ಚಾಗಿ ಬಳಸುವುದರಿಂದ 'ಡೆಕೋರೇಶನ್ ರಾಣಿ' ಎಂದು ಇದನ್ನು ಕರೆಯಬಹುದು. ವಿದೇಶದ ಹೂವಾದ ಇದರ ಹೆಸರು 'ಟಾರ್ಚ್ ಜಿಂಜರ್.' ಈಗ ಭಾರತದಲ್ಲೂ ಕಾಣಬಹುದಾದ ಈ ಹೂವನ್ನು ದೊಡ್ಡ ದೊಡ್ಡ ಹೋಟೇಲುಗಳಲ್ಲಿ ಸಭೆ, ಸಮಾರಂಭಗಳಲ್ಲಿ, ಮದುವೆಮನೆಗಳಲ್ಲಿ ಹಾಗೂ ಔತಣ ಕೂಟಗಳಲ್ಲಿ ಹೀಗೆ ಹಲವಾರು ಕಡೆಗಳಲ್ಲಿ ಒಳಾಂಗಣದ ಅಲಂಕಾರಕ್ಕಾಗಿ ಹೆಚ್ಚಾಗಿ ಬಳಸುತ್ತಾರೆ. ಇದನ್ನು ಕೈಯಲ್ಲಿ ಸವರಿದರೆ, ಪ್ಲಾಸ್ಟಿಕ್ ಹೂವನ್ನು ಮುಟ್ಟಿದ ಅನುಭವವನ್ನು ಕೊಡುವ ಈ ಹೂವಿನ ತವರು–ಮಲೇಶಿಯಾ, ಇಂಡೋನೇಶಿಯಾದ ಸಮೀಪ, ಇದು ಸುಮಾರು 15 ರಿಂದ 20 ದಿವಸದವರೆಗೆ, ಬಾಡದೆ ತನ್ನ ಸೌಂದರ್ಯವನ್ನು ಉಳಿಸಿಕೊಳ್ಳಬಹುದಾದ್ದರಿಂದ, ಇಂದು ಇದು ತುಂಬ ಬೇಡಿಕೆಯುಳ್ಳ, ಬೆಲೆಬಾಳುವ ಹೂವಾಗಿದೆ. ಕೆಂಪು, ಬಿಳಿ, ಪಿಂಕ್ ಮುಂತಾದ ಬಣ್ಣಗಳಲ್ಲಿ ಶೋಭಿಸುತ್ತಿರುವ ಈ ಹೂವಿನ ಸಸ್ಯಶಾಸ್ತ್ರೀಯ ಹೆಸರು Etlingera elatior; ಇದು Zingiberaceae ಕುಟುಂಬಕ್ಕೆ ಸೇರಿದೆ.



ಈ ಹೂವಿನ ಗಿಡವನ್ನು ಗಡ್ಡೆಯಿಂದ ಸಸ್ಯಾಭಿವೃದ್ಧಿ ಮಾಡಬಹುದು. ಇದರ ಗಡ್ಡೆಯನ್ನು ಎಂಟು ಗಂಟೆ ನೀರಿನಲ್ಲಿ ನೆನೆಸಿ, ನಂತರ ಮಣ್ಣನ್ನು ಚೆನ್ನಾಗಿ ಅಗೆದು ಸಡಿಲಗೊಳಿಸಿ ನಡಬೇಕು. ಇದು ಬಾಳೆಗಿಡದಂತೆ ಗುಂಪು ಗುಂಪಾಗಿ ಬೆಳೆಯುತ್ತದೆ. ಬಾಳೆಯಂತೆ ಇದರ ಬುಡದಲ್ಲೂ ಸಣ್ಣ ಸಣ್ಣ ಪಿಳ್ಳೆಗಳು ಹುಟ್ಟಿಕೊಳ್ಳುತ್ತವೆ. ಈ ಪಿಳ್ಳೆಗಳಿಂದಲೂ ಹೊಸ ಸಸ್ಯವನ್ನು ಮಾಡಬಹುದು. ಇದು ಸುಮಾರು 3 ರಿಂದ 4 ಮೀಟರ್ ಎತ್ತರ ಬೆಳೆಯಬಲ್ಲದು. ಮಲೇಶಿಯಾ, ಇಂಡೋನೇಶಿಯಾದ ಜನರು ಈ ಸಸ್ಯವನ್ನು ಹಲವಾರು ರೋಗಗಳಿಗೆ ಮನೆ ಔಷಧಿಯಾಗಿಯೂ ಉಪಯೋಗಿಸುತ್ತಾರೆ. ಈ ಹೂವಿನ ಮೊಗ್ಗಿನಿಂದ 'ರೋಜಾಕ್' ಎಂಬ ಸಲಾಡನ್ನು ಸಿಂಗಪುರದಲ್ಲಿ ಜನರು ತಯಾರಿಸಿ ಸವಿಯುತ್ತಾರೆ. ಅಲ್ಲಿ ಈ ಸಲಾಡ್ ಬಹಳ ಜನಪ್ರಿಯವಾಗಿರುವುದರಿಂದ ಅಲ್ಲಿಯ ಜನರು ಈ ಹೂವನ್ನು 'ರೋಜಾಕ್' ಎಂದೇ ಕರೆಯುತ್ತಾರೆ. ಅಲ್ಲಿಯ ಜನರು ಈ ಹೂವಿನ ಮೊಗ್ಗಿನಿಂದ (ಲಾಕ್ಸಾ) ಎಂಬ ತಿಂಡಿಯನ್ನೂ ಮಾಡಿ ಬಹಳ ಇಷ್ಟಪಟ್ಟು ಸವಿಯುತ್ತಾರೆ.

ಈ ಹೂವುಗಳಿಂದ ಹಲವಾರು ನಮೂನೆಗಳಲ್ಲಿ ಒಳಾಂಗಣದ ಅಲಂಕಾರವನ್ನು ಮಾಡಬಹುದು. ಇದೊಂದು ಗಡುತರ ಹೂವಾದ್ದರಿಂದ ಬಳಸಲು ಬಹಳ ಸುಲಭವಾಗಿದೆ. ಇದರ ಬಣ್ಣವೂ ಅತ್ಯಾಕರ್ಷಕವಾದ್ದರಿಂದ ಯಾವುದೇ ಅಲಂಕಾರಗಳಿಗೂ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಇತ್ತೀಚೆಗೆ ಕೆಲವು ಕೃಷಿಕರು ಇದರ ಸೌಂದರ್ಯಕ್ಕೆ ಮಾರುಹೋಗಿ ತಮ್ಮ ತೋಟಗಳಲ್ಲಿ ಇದನ್ನು ಪ್ರವೃತ್ತಿಯಾಗಿ ಬೆಳೆಸಿ ತಮ್ಮ ಹಾಗೂ ಬಂಧುಗಳ ಮನೆಗಳಲ್ಲಿ ಶುಭ ಸಮಾರಂಭಗಳಲ್ಲಿ ಒಳಾಂಗಣದ ಅಲಂಕಾರಕ್ಕಾಗಿ ಉಪಯೋಗಿಸಿ ಸಂಭ್ರಮಿಸುತ್ತಾರೆ. ಮಾರುಕಟ್ಟೆಯಲ್ಲಿ ಈ ಹೂವಿಗೆ ಒಳ್ಳೆಯ ಬೇಡಿಕೆ ಇರುವುದರಿಂದ, ಇದನ್ನು ವಾಣಿಜ್ಯ ಬೆಳೆಯಾಗಿಯೂ ಬೆಳೆಸುವವರು ಇದ್ದಾರೆ. ಇದು ತನ್ನ ದೀರ್ಘ ಬಾಳಿಕೆ ಹಾಗೂ ತನ್ನ ಆಕರ್ಷಕ ಸೌಂದರ್ಯದಿಂದ ಇಂದು ಎಲ್ಲರ ಮನವನ್ನು ಸೂರೆಗೊಳ್ಳುತ್ತಿದೆ.

ಬಣ್ಣಗಳನ್ನು ವೀಕ್ಷಿಸುವ ನಮ್ಮ ಕಣ್ಣಿನ ಸಾಮರ್ಥ್ಯವು ಹೇಗೆ ಅದ್ಭುತವೋ ಹಾಗೆಯೇ ಅರಳಿದ ಹೂವುಗಳು, ಬಚ್ಚಿಟ್ಟ, ಬಿಚ್ಚಿಟ್ಟ ಸೌಂದರ್ಯವೂ ಬಣ್ಣವೂ ಅದ್ಭುತ.

